ವಿಜಯವಾಣಿ
ಕನ್ನಡಿಗರ ಧ್ವನಿ

# ಜೈನ್ ವಿವಿಯಿಂದ ಶಿಷ್ಯವೇತನ ವಿತರಣೆ

## 163 ಬಿಕಾಂ ವಿದ್ಯಾರ್ಥಿಗಳಿಗೆ 46 ಲಕ್ಷ ರೂ. ನೆರವು ನೀಡಿದ ಸಂಸ್ಥೆ

**ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡಲು ಜೈನ್ ವಿಶ್ವವಿದ್ಯಾಲಯ ಮೊದಲ ವರ್ಷದ ಬಿಕಾಂ ವಿದ್ಯಾರ್ಥಿಗಳಿಗೆ 46 ಲಕ್ಷ ರೂ. ವಿದ್ಯಾರ್ಥಿವೇತನ ನೀಡಿದೆ. ಆರ್ಥಿಕ ಸಹಾಯ ಯೋಜನೆಯಡಿ ನೀಡಲಾದ ಈ ನೆರವಿನ ಲಾಭ 163 ವಿದ್ಯಾರ್ಥಿಗಳಿಗೆ ಸಿಕ್ಕಿದೆ. ದ್ವಿತೀಯ ಪಿಯು ವಾಣಿಜ್ಯ ವಿಭಾಗದಲ್ಲಿ ಅತಿಹೆಚ್ಚು ಅಂಕ ಗಳಿಸಿದವರನ್ನು ಗುರುತಿಸಿ ವಿದ್ಯಾರ್ಥಿ ವೇತನ ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟ ಶಿಕ್ಷಣ ನೀಡುವ ಜತೆಗೆ ಉತ್ತಮ ಮಾರ್ಗದರ್ಶನ ಕೂಡ ನೀಡುತ್ತೇವೆ. ಪ್ರಸ್ತುತ ಕೈಗಾರಿಕೋದ್ಯಮಕ್ಕೆ ಸೂಕ್ತವಾದ ಪಠ್ಯಕ್ರಮ ರೂಪಿಸಿದ್ದೇವೆ. ಇದರಿಂದ ವ್ಯಾಸಂಗದ ನಂತರ ಉದ್ಯೋಗ ಪಡೆಯಲು ಅವರಿಗೆ ಅನುಕೂಲವಾಗುತ್ತದೆ ಎಂದು ಜೈನ್ ವಿವಿ ಕುಲಪತಿ ಡಾ.ಎನ್. ಸುಂದರರಾಜನ್ ತಿಳಿಸಿದರು.

» **ಅತಿಹೆಚ್ಚು ಅಂಕ ಗಳಿಸಿದ ಪ್ರತಿಭಾವಂತರಿಗೆ ಮನ್ನಣೆ**

ವಿದ್ಯಾರ್ಥಿ ವೇತನ ಪಡೆದ ನವನೀತ್ ರಾವ್, ನನಗೆ ಖುಷಿ ಆಗಿದೆ. ಉನ್ನತ ವ್ಯಾಸಂಗಕ್ಕೆ ಪ್ರೋತ್ಸಾಹ ಸಿಕ್ಕಂತಾಗಿದೆ ಎಂದರು.



ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳ ಸಮೂಹದೊಂದಿಗೆ ಕುಲಪತಿ ಡಾ. ಎನ್. ಸುಂದರ್‌ರಾಜನ್ ಮತ್ತಿತರ ಸಿಬ್ಬಂದಿ.